# ‘ಛಪಾಕ್’ ತಂಡದಿಂದ ಹೀಗೊಂದು ಪ್ರಯೋಗ

ಅಪಾಯಕಾರಿ ಆ್ಯಸಿಡ್‌ಗಳನ್ನು ಕಾನೂನಿನ ಅಳುಕಿಲ್ಲದೆ ಎಲ್ಲೆಡೆ ಮಾರುವ ವ್ಯಾಪಾರ ಜಾಲ ನಮ್ಮಲ್ಲಿದೆ. ಕಿರಾಣಿ ಅಂಗಡಿಗಳಲ್ಲಿ ಕೂಡ ನೀರಿನ ಬಾಟಲಿಗಳಲ್ಲಿ, ಗಾಜಿನ ಸೀಸೆಗಳಲ್ಲಿ ಆ್ಯಸಿಡ್ ಮಾರಲಾಗುತ್ತದೆ. ಬಚ್ಚಲು–ಶೌಚಾಲಯಗಳನ್ನು ಸ್ವಚ್ಛಗೊಳಿಸಲು ಆ್ಯಸಿಡ್ ಬಳಸಲಾಗುತ್ತಿದೆ. ಅಂಗಡಿಗಳಲ್ಲಿ ಮಾತ್ರವಲ್ಲ, ಆ್ಯಸಿಡ್ ಹಾಗೂ ಇತರ ಸ್ವಚ್ಛತಾ ದ್ರಾವಣಗಳನ್ನು ದ್ವಿಚಕ್ರ ವಾಹನಗಳಲ್ಲಿ ಬೀದಿ ಬೀದಿ ಸುತ್ತಿ ಮಾರುವವರೂ ಇದ್ದಾರೆ. ಲೇಬಲ್ ಇಲ್ಲದ ಆ್ಯಸಿಡ್ ಬಾಟಲಿಗಳು ಹತ್ತು ಇಪ್ಪತ್ತು ರೂಪಾಯಿಗೆ ಬಿಕರಿಯಾಗುತ್ತವೆ. ಉತ್ಪಾದಕರು, ವಿತರಕರ ಹೆಸರುಗಳನ್ನುಳ್ಳ ಬಾಟಲಿಗಳೂ ಅಂಗಡಿಗಳಲ್ಲಿ ಲಭ್ಯ.

‘ಆ್ಯಸಿಡ್ ಎರಚುವುದರ ಮೊದಲ ಕಾರಣ, ತೀರಾ ಸುಲಭಕ್ಕೆ ಆ್ಯಸಿಡ್ ಸಿಗುವುದೇ ಆಗಿದೆ’. – ಈ ಮಾತನ್ನು ಉಚ್ಚರಿಸಿದ್ದು ದೀಪಿಕಾ ಪಡುಕೋಣೆ. ಅವರು ಸುಮ್ಮಸುಮ್ಮನೆ ಹೇಳಿದ್ದಲ್ಲ. ತಮ್ಮ ಮಾತಿಗೆ ಪೂರಕವಾದ ಪ್ರಯೋಗವನ್ನೂ ಅವರು ಮಾಡಿ ತೋರಿಸಿದ್ದಾರೆ.‘ಛಪಾಕ್’ ಚಿತ್ರತಂಡ ದೀಪಿಕಾ ಪಡುಕೋಣೆ ನೇತೃತ್ವದಲ್ಲಿ ಇತ್ತೀಚೆಗೆ ಒಂದು ಪ್ರಯೋಗವನ್ನು ಮಾಡಿತು. ಒಂದಿಷ್ಟು ಜನ ಕಲಾವಿದರಿಗೆ ಪತಿ, ಪತ್ನಿ, ವಿದ್ಯಾರ್ಥಿ, ಕೂಲಿ, ಪ್ಲಂಬರ್, ಬ್ಯುಸಿನೆಸ್‌ಮೆನ್, ಮದ್ಯಪಾನಿ, ಮೆಕ್ಯಾನಿಕ್ ಹೀಗೆ ಬೇರೆ ಬೇರೆ ರೂಪಗಳಲ್ಲಿ ಅಂಗಡಿಗಳಿಗೆ ಕಳುಹಿಸಿತು. ಅವರ ಉಡುಪಿನೊಳಗೆ ಗೌಪ್ಯಕ್ಯಾಮೆರಾಗಳನ್ನು ಮತ್ತು ಮೈಕ್‌ಗಳನ್ನು ಅಳವಡಿಸಲಾಗಿತ್ತು. ಮರೆಯಲ್ಲಿ ನಿಂತ ಕ್ಯಾಮೆರಾಮನ್‌ಗಳು ಅವರ ಚಲನವಲನಗಳನ್ನು ಸೆರೆಹಿಡಿಯುತ್ತಿದ್ದರು.

ಹೀಗೆ ಬೇರೆ ಬೇರೆ ರೂಪಗಳಲ್ಲಿ ಬೇರೆ ಬೇರೆ ಅಂಗಡಿಗಳಿಗೆ ಹೋದ ಅವರು, ಆ್ಯಸಿಡ್ ಕೇಳಿದರು. ‘ಸಾದಾ ಸೀದಾ ಆ್ಯಸಿಡ್ ಬೇಡ. ಸ್ಟ್ರಾಂಗ್ ಆಗಿರುವ ಆ್ಯಸಿಡ್ಡೇ ಬೇಕು’ ಎನ್ನುವುದು ಅವರ ಬೇಡಿಕೆಯಾಗಿತ್ತು. ಬಹುತೇಕ ಕಡೆಗಳಲ್ಲಿ ಯಾವ ವಿಚಾರಣೆಯನ್ನೂ ಮಾಡದೆ ಅವರಿಂದ ಹಣ ಪಡೆದುಕೊಂಡು ಅಪಾಯಕಾರಿ ಆ್ಯಸಿಡ್ ಬಾಟಲಿಗಳನ್ನು ಒಪ್ಪಿಸಿದ್ದರು. ಕೆಲವರಷ್ಟೇ ‘ಯಾಕಿದು?’ ಎಂದು ಒಂದು ಮಾತಿನಲ್ಲಿ ವಿಚಾರಿಸಿದ್ದರು. ಒಂದಿಬ್ಬರು ಮಾತ್ರ, ‘ಏನೂ ಉಪರಾಟಿ ಕೆಲಸಗಳನ್ನು ಮಾಡಬೇಡ’ ಎಂದು ಎಚ್ಚರಿಕೆ ಕೊಟ್ಟರು. ಒಬ್ಬನೇ ಒಬ್ಬ ಅಂಗಡಿಯವ, ಗುರುತಿನ ಚೀಟಿ ಕೇಳಿ ಅದಿಲ್ಲದೇ ಆ್ಯಸಿಡ್ ಕೊಡಲಾರೆ ಎಂದು ನಿರಾಕರಿಸಿದ್ದ.

ಬಹುತೇಕರು ಅಪಾಯಕಾರಿ ಆ್ಯಸಿಡ್ ಸಮೇತ ವಾಪಸ್ ಬಂದಿದ್ದರು. ಆ ದಿನವೊಂದರಲ್ಲಿ ‘ಛಪಾಕ್’ ಚಿತ್ರತಂಡಕ್ಕೆ ಒಟ್ಟು 24 ಆ್ಯಸಿಡ್ ಬಾಟಲಿಗಳು ದೊರೆತಿದ್ದವು!

ಛಪಾಕ್ ತಂಡದ ನಡೆಸಿದ ಪ್ರಯೋಗ ವೀಕ್ಷಿಸಲು bit.ly/2vkiKUn/ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.



ಸುಟ್ಟುಹಾಕುವಲ್ಲಿ ದಾಳಿಕೋರ ಸೋತುಹೋಗಿದ್ದಾನೆ’ ಎನ್ನುವ ಲಕ್ಷ್ಮಿ ಅವರ ಮಾತು, ದೌರ್ಜನ್ಯಕ್ಕೆ ಒಳಗಾಗುವ ಎಲ್ಲ ಹೆಣ್ಣುಮಕ್ಕಳಿಗೂ ಸ್ಫೂರ್ತಿಯಾಗಬೇಕು.

ಲಕ್ಷ್ಮಿ ಅವರಂತೆಯೇ ರೇಷ್ಮಾ ಖುರೇಷಿ ಕೂಡ ಗಟ್ಟಿಗಿತ್ತಿ ಹಾಗೂ ಅದೃಷ್ಟವಂತೆ. ಅವರ ಹೋರಾಟಕ್ಕೆ ಸಂದ ಬಹುದೊಡ್ಡ ಗೌರವ – 2016ರಲ್ಲಿ ನ್ಯೂಯಾರ್ಕ್‌ನಲ್ಲಿ ನಡೆದ ಫ್ಯಾಷನ್ ಕಾರ್ಯಕ್ರಮಕ್ಕೆ ದೊರೆತ ಆಹ್ವಾನ. ಸೌಂದರ್ಯದ ಸಿದ್ಧಮಾದರಿಗಳನ್ನು ಮುರಿಯಬೇಕೆನ್ನುವ ಉದ್ದೇಶದಿಂದ ಆಯೋಜಕರು ರೇಷ್ಮಾ ಅವರನ್ನು ಆಹ್ವಾನಿಸಿದ್ದರು. ವಿದೇಶಿ ವೇದಿಕೆಯಲ್ಲವರು ರೂಪದರ್ಶಿಯಾಗಿ ರ‍್ಯಾಂಪ್ ಮೇಲೆ ಹೆಜ್ಜೆ ಹಾಕುವ ಮೂಲಕ ತಮ್ಮ ಆತ್ಮಸ್ಥೈರ್ಯವನ್ನು ಮತ್ತಷ್ಟು ಹೆಚ್ಚಿಸಿಕೊಂಡರು. ‘ಈ ವೇದಿಕೆ ಖಂಡಿತವಾಗಿಯೂ ನನ್ನ ಜೀವನವನ್ನೇ ಬದಲಿಸಲಿದೆ’ ಎಂದವರು ನ್ಯೂಯಾರ್ಕ್‌ನಲ್ಲಿ ಸಂತಸದಿಂದ ಉದ್ಗರಿಸಿದ್ದರು.

‘ನಮ್ಮ ಬದುಕಲ್ಲಿ ಏನೆಲ್ಲ ಸಂಭವಿಸಿತೋ ಅದರಲ್ಲಿ ನಮ್ಮ ತಪ್ಪೇನೂ ಅಲ್ಲ. ಮಾಡದ ತಪ್ಪಿಗಾಗಿ ನಾವು ನಮ್ಮ ಜೀವನವನ್ನೇಕೆ ಬಲಿ ಕೊಡಬೇಕು? ಬದುಕನ್ನು ನಾವು ಏಕೆ ಆನಂದಿಸಬಾರದು?’ ಎಂದು ರೇಷ್ಮಾ ಪ್ರಶ್ನಿಸುತ್ತಾರೆ. ‘ನಮ್ಮನ್ನು ನಾವು ಮಬ್ಬುಬೆಳಕಿನಲ್ಲಿ ನೋಡಿಕೊಳ್ಳಬಾರದು. ಹೊರಗೆ ಬರಬೇಕು, ಯಾವುದಾದರೊಂದು ಕೆಲಸವನ್ನು ಹುಡುಕಿಕೊಂಡು ದುಡಿಯಬೇಕು’ ಎನ್ನುವುದು ಸಂತ್ರಸ್ತ ಹೆಣ್ಣುಮಕ್ಕಳಿಗೆ ಅವರು ನೀಡುವ ಕರೆ.

ಲಕ್ಷ್ಮಿ ಅಗರವಾಲ್ ನ್ಯಾಯಾಲಯವನ್ನು ಎಡತಾಕಿದ್ದು ತನಗೆ ನ್ಯಾಯ ದೊರಕಿಸಿಕೊಳ್ಳಲು ಮಾತ್ರವಲ್ಲ; ಆ್ಯಸಿಡ್ ದಾಳಿಗೆ ಸಂಬಂಧಿಸಿದಂತೆ ಕಠಿಣ ಕಾನೂನು ರೂಪಿಸಬೇಕು ಎನ್ನುವುದು ಆಕೆಯ ಕಾನೂನು ಹೋರಾಟದ ಬಹುಮುಖ್ಯ ಭಾಗವಾಗಿದೆ. ಆ್ಯಸಿಡ್ ದೌರ್ಜನ್ಯಗಳ ಕುರಿತಂತೆ ದೇಶದಲ್ಲಿ ಅಭಿಯಾನವೊಂದನ್ನು ರೂಪಿಸಿದ ಕೀರ್ತಿ ಲಕ್ಷ್ಮಿ ಹಾಗೂ ರೇಷ್ಮಾ ಅವರಂಥ ಹೆಣ್ಣುಮಕ್ಕಳಿಗೆ ಸಲ್ಲಬೇಕು.

### ಸೌಜನ್ಯದ ಅಭಾವ

ಭಾರತದಲ್ಲಿ ಕೆಂಪು ತುಟಿಬಣ್ಣ ದೊರೆತಷ್ಟೇ ಸಲೀಸಾಗಿ ಆ್ಯಸಿಡ್ ಕೂಡ ದೊರೆಯುತ್ತದೆ ಎಂದು ರೇಷ್ಮಾ ವಿಷಾದದಿಂದ ಹೇಳುತ್ತಾರೆ.



**ಅಂತರಂಗದ ರಿಂಗಣ**

ಆ್ಯಸಿಡ್ ದಾಳಿಗೆ ತುತ್ತಾದ ಲಕ್ಷ್ಮೀ ಅಗರವಾಲ್ ಅವರ ಜೀವನಾಧಾರಿತ ಚಿತ್ರ ‘ಛಪಾಕ್’ ಚಿತ್ರದಲ್ಲಿ ದೀಪಿಕಾ ಪಡುಕೋಣೆ. ದೈಹಿಕ ಸೌಂದರ್ಯವೇ ಎಲ್ಲಕ್ಕಿಂತ ಮುಖ್ಯವಾಗುವ ಬಣ್ಣದ ಲೋಕದಲ್ಲಿ, ಅಗ್ರಶ್ರೇಣಿಯ ನಟಿಯೊಬ್ಬಳು ಆ್ಯಸಿಡ್ ಸಂತ್ರಸ್ತೆಯ ಪಾತ್ರದಲ್ಲಿ ನಟಿಸಿದ್ದು, ಅವರ ಅಂತರಂಗದ ಸೌಂದರ್ಯಕ್ಕೂ ಕನ್ನಡಿ ಹಿಡಿದಂತಿದೆ.